ಹೆದರಿಕೊಂಡೇ ಇರುತ್ತಾನೆ. ಸಂಪಂಗಿನ ಹಿಡಿದು ಬಿಟ್ರೆ, ಎಲ್ಲಾ ಪ್ರಶ್ನೆಗೂ ಉತ್ತರ ಸಿಗುತ್ತೆ."

"ಅಷ್ಟು ಸರಳ ಇಲ್ಲ, ಬಿದ್ದಪ್ಪ. ಹಲವಾರು ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ. ಆ ಲಕೋಟೆಯಲ್ಲಿ ವಿಳಾಸ ಮತ್ತು ಹೆಸರು ಬೇರೆ ಬೇರೆ ಹಸ್ತಾಕ್ಷರದಲ್ಲಿರುವುದೇಕೆ? ಅದರ ಬಗ್ಗೆ ಯೋಚಿಸಿದಿಯಾ? ನಾನು ವಿಳಾಸದ ಮೇಲೆ ಅಂಟಿಸಿದ್ದ ಚೀಟಿಯನ್ನು ಜಾಗ್ರತೆಯಿಂದ ತೆಗೆದೆ. ಒಳಗೆ ಬೇರೊಂದು ವಿಳಾಸ ಮತ್ತು ಮೊಬೈಲ್ ನಂಬರು ಸಿಕ್ತು. ಆ ನಂಬರಿಗೆ ಫೋನು ಮಾಡ್ದೆ. ಅದು ಸಂಪಂಗಿಯದ್ದೇ ಫೋನು. ಆದ್ರೆ ಈ ಸಂಪಂಗಿ ಅಲ್ಲ! ವಿರಾಜಪೇಟೆಯ ವ್ಯಕ್ತಿಯದ್ದು. ಅವ್ನು ಪಾದಯ್ಯನ ಸಂಬಂಧಿಕನಂತೆ. ತನಗೆ ಪಾದಯ್ಯನಿಂದ ಯಾವುದೋ ಲಕೋಟೆ ಬಂದಿಲ್ಲ ಅಂತ ಆತ ಹೇಳ್ದ. ಪಾದಯ್ಯ ಯಾವ್ದೋ ಕಮಿಷನ್ ಬಿಸಿನೆಸ್ ಮಾಡ್ತಿದಾನೆ, ಚೆನ್ನಾಗಿ ದುಡ್ಡು ಮಾಡಿದ್ದಾನೆ ಮತ್ತು ತನ್ನೊಂದಿಗೆ ಹೆಚ್ಚಿನ ಸಂಪರ್ಕದಲ್ಲಿ ಇಲ್ಲ ಅಂತ ಹೇಳ್ದ. ಇದರಿಂದ ಒಂದು ವಿಷ್ಯ ಖಚಿತವಾಯಿತು. ವಿರಾಜಪೇಟೆಯ ಸಂಪಂಗಿ ಅಸಲಿ, ಕುಟ್ಟದ ಸಂಪಂಗಿ ನಕಲಿ. ಕುಟ್ಟದಲ್ಲಿರುವವನ ಅಸಲಿ ಹೆಸರು ಸಂಪಂಗಿ ಅಲ್ಲ. ಇರಲಿ, ಪಾದಯ್ಯ ಲಕೋಟೆಯಲ್ಲಿ ವಿರಾಜಪೇಟೆಯ ಸಂಪಂಗಿಯ ಹೆಸರು, ವಿಳಾಸ ಬರೆದರೂ, ಮತ್ತೆ ಅದನ್ನು ಬೇರೆ ಯಾರೋ ಬದಲಾಯಿಸಿದ್ದಾರೆ. ಪಾದಯ್ಯ ಯಾಕೆ ಕುಟ್ಟದ ವಿಳಾಸ ಬರೆದಿಲ್ಲ? ಪ್ರಾಯಶಃ ಆ ಕವರನ್ನು ಯಾರೋ ನೋಡಿದರೆ ಅಪಾಯ ಅಂತ ಪಾದಯ್ಯ ಯೋಚಿಸಿದ್ದಾನೆ. ಹಾಗಿದ್ದರೆ ವಿಳಾಸ ಬದಲಿಸಿದ್ದು ಯಾರು? ಬಹುಶಃ ಕೊರಿಯರ್ ಏಜೆನ್ಸಿಯವ್ನು ಅಥವಾ ಪಾದಯ್ಯನಿಂದ ಪತ್ರ ಕೊರಿಯರ್ ಮಾಡಲು ತಂದವನು. ಎರಡನೇ ಸಾಧ್ಯತೆ ಜಾಸ್ತಿ ಅಂತ ನನ್ನ ಅನಿಸಿಕೆ. ಅಂದರೆ ಸಂಪಂಗಿ ಇರುವ ಸ್ಥಳ ರಹಸ್ಯವಾಗಿರಬೇಕೆಂಬುದು ಅದರ ಉದ್ದೇಶ ಎನ್ನುವುದು ಖಚಿತ. ಯಾಕೆ? ಈ ಪ್ರಶ್ನೆಗೆ ನಾಡಿದ್ದು ಶನಿವಾರ ಉತ್ತರ ಸಿಗಬಹುದು ಅಂತ ನನಗನಿಸುತ್ತೆ. ಅಲ್ಲಿಯವರೆಗೂ ನಾವು ಕಾಯಬೇಕು. ಆ ದಿವ್ಸ ಪೊಲೀಸರ ನೆರವು ಬೇಕಾಗಬಹುದು. ಕುಟ್ಟ ಠಾಣೆಲಿ ಈಗ ಇರೋದು ರವೀಂದ್ರ ಠಾಣೆ. ನೀನು ಆತನಿಗೆ ವಿಷ್ಯ ತಿಳ್ಸು. ಸಂಜೆ ಐದು ಗಂಟೆಗೆ ಎರಡು ಜನ ಪೇದೆಗಳೊಡನೆ ಮಫ್ತಿಲಿ ಸಿದ್ಧನಾಗಿರಲಿಕ್ಕೆ ಹೇಳು."

ಕರಮಚಂದನ ನುಡಿಗಳು ನನಗೆ ಒಗಟಿನಂತೆ ಕಂಡವು. ಆ ಶನಿವಾರಕ್ಕಾಗಿ ನಾನು ಕುತೂಹಲದಿಂದ ಕಾಯತೊಡಗಿದೆ.

★★★

ಶನಿವಾರ ಮಧ್ಯಾಹ್ನ ಮೂರುವರೆಯ ಹೊತ್ತಿಗೆ ನಮ್ಮ ಕಾರನ್ನು ಕುಟ್ಟದತ್ತ ಚಲಾಯಿಸಿದೆ. ಕರಮಚಂದನ ಸೂಚನೆಯಂತೆ ರಿವಾಲ್ವರನ್ನು ಜೇಬಿಗೆ ಸೇರಿಸಿದ್ದೆ. ಅದರ ಉಪಯೋಗ ಬರುವ ಸಾಧ್ಯತೆಯಿದೆ ಎಂದು ಆತ ಹೇಳಿದ್ದ. ಸುಮಾರು ಒಂದೂವರೆ ತಾಸಿನಲ್ಲಿ ನಾವು ಕುಟ್ಟ ಠಾಣೆ ತಲಪಿದೆವು. ಠಾಣೆ ನಮಗಾಗಿ ಕಾಯುತ್ತಿದ್ದ.

"ನಮ್ಮ ಕಾರಲ್ಲೇ ಹೋಗೋಣ. ನಿಮ್ಮ ವಾಹನ ಬೇಡ."

ಮತ್ತೆ ಇಪ್ಪತ್ತು ನಿಮಿಷಗಳಲ್ಲಿ ನಾವು ನಿರ್ಮಲಮಾತೆ ಚರ್ಚ್ ದಾಟಿ, ಪೂರ್ವಕ್ಕೆ ಚಲಿಸಿದೆವು. ಇಕ್ಕಟ್ಟಾದ ಮಣ್ಣಿನ ಹಾದಿ. ಎರಡೂ ಕಡೆ ದಟ್ಟವಾದ ವನ ಪ್ರದೇಶ. ಬಹುತೇಕ ನಿರ್ಜನ. ಸುಮಾರು ಒಂದೂವರೆ ಕಿಲೋಮೀಟರ್ ದೂರ ಕ್ರಮಿಸಿದಾಗ, ಬಲಭಾಗದಲ್ಲಿ ಕುಟ್ಟತ್ತಮ್ಮ ಗುಡಿಯೊಂದು ಕಂಡಿತು. ಅಲ್ಲೇ ತುಸು ದೂರದಲ್ಲಿ ಮರೆಯಲ್ಲಿ ಕರಮಚಂದನ ಸೂಚನೆಯಂತೆ ಕಾರು ನಿಲ್ಲಿಸಿದೆ. ಗುಡಿಯು ನಿರ್ಜನವಾಗಿತ್ತು. ಪ್ರಾಯಶಃ ಅರ್ಚಕರು ಆಗಲೇ ತೆರಳಿದಂತೆ ಇತ್ತು. ನಾವು ಗುಡಿಯ ಬಲಪಾರ್ಶ್ವದಲ್ಲಿ ದಟ್ಟವಾದ ಪೊದೆಗಳ ಮರೆಯಲ್ಲಿ ಅಡಗಿ ಕುಳಿತೆವು. ಸಮಯ